wardens / hostel superintendents and the selection process is in progress.

ಬಿ.ಸಿ.ಎಂ. ವಿದ್ಯಾರ್ಥಿನಿಲಯಗಳು.

1484(2134)

ಶ್ರೀ ಎಸ್.ಅಂಗಾರ (ಸೂಳ್ಯ): ಮಾನ್ಯ ಹಿಂದುಳಿದ ವರ್ಗಗಳ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಸುಳ್ಯ ತಾಲ್ಲೂಕಿನಲ್ಲಿರುವ ಪ್ರೌಢ ಹಾಗೂ ಪದವಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಂದ ಬಿ.ಸಿ.ಎಂ. ವಿದ್ಯಾರ್ಥಿ ನಿಲಯಗಳಿಗೆ ಬೇಡಿಕೆ ಹಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಿ.ಸಿ.ಎಂ. ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿ ನಿಲಯಗಳಲ್ಲಿ ಖಾಲಿ ಇರುವ ಮೇಲ್ವಿಚಾರಕರ ಹುದ್ದೆಗಳ ಸಂಖ್ಯೆ ಎಷ್ಟು? ಮತ್ತು ಖಾಲಿ ಇರುವ ಹುದ್ದೆಗಳನ್ನು ಎಂದು ಭರ್ತಿ ಮಾಡಲಾಗುವುದು?

ಶ್ರೀ ಮಾಲೀಕಯ್ಯ ವಿ.ಗುತ್ತೇದಾರ್(ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):

ಅ) ಹೌದು.

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಿಸಿಎಂ ವಿದ್ಯಾರ್ಥಿ ನಿಲಯ ಹಾಗು ವಿದ್ಯಾರ್ಥಿನಿ ನಿಲಯಗಳಲ್ಲಿ 7 ಮೇಲ್ವಿಚಾರಕರ ಹುದ್ದೆಯು ಖಾಲಿ ಇರುತ್ತವೆ. ಈ ಹುದ್ದೆಗಳನ್ನು ತುಂಬಲು ಜರೂರು ಕ್ರಮ ಕೈಗೊಳ್ಳಲಾಗುವುದು.

ಹಾವೇರಿ ಜಿಲ್ಲೆಯಲ್ಲಿರುವ ಖಾಸಗಿ ವಿದ್ಯಾರ್ಥಿನಿಲಯಗಳು.

1485(2072)

ಶ್ರೀ ಉಜ್ಜಿನೇಶ್ವರ ಬಸವನಪ್ಪ ಬಣಕಾರ್(ಹಿರೇಕೆರೂರು): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಹಾವೇರಿ ಜಿಲ್ಲೆಯಲ್ಲಿರುವ ಖಾಸಗಿ ವಿದ್ಯಾರ್ಥಿನಿಲಯಗಳ ಒಟ್ಟು ಸಂಖ್ಯೆ

ಎಷ್ಟು? ಅವುಗಳಿರುವ ಸ್ಥಳಗಳಾವುವು ?

ಆ) 1998-99 ನೇ ಸಾಲಿನಲ್ಲಿ ಈ ವಿದ್ಯಾರ್ಥಿನಿಲಯಗಳಲ್ಲಿ ಇದ್ದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಶ್ರೀ ಕೆ.ಎಂ.ಕೃಷ್ಣರೆಡ್ಡಿ(ಸಮಾಜ ಕಲ್ಯಾಣ ಸಚಿವರು):

ಅ ಮತ್ತು ಆ) ಹಾವೇರಿ ಜಿಲ್ಲೆಯಲ್ಲಿರುವ ಖಾಸಗಿ ವಿದ್ಯಾರ್ಥಿನಿಲಯಗಳ ಒಟ್ಟು ಸಂಖ್ಯೆ 10. ಅವುಗಳ ಸ್ಥಳದ ವಿವರಗಳು ಹಾಗೂ 1998-99ನೇ ಸಾಲಿನಲ್ಲಿ ಈ ವಿದ್ಯಾರ್ಥಿನಿಲಯಗಳಲ್ಲಿ ಇದ್ದ ವಿದ್ಯಾರ್ಥಿಗಳ ಸಂಖ್ಯೆಯ ವಿವರ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ವಿದ್ಯಾರ್ಥಿನಿಲಯಗಳ ವಿವರ	ಸೇರಿಸಲ್ಪಟ್ಟ ವಿದ್ಯಾರ್ಥಿಗಳ ಸಂಖ್ಯೆ
1.	ಶಿವಾನಂದ ಉಚಿತ ಪ್ರಸಾದ ನಿಲಯ, ಬೋಗಾದಿ, ಹಿರೇಕೆರೂರು ತಾ:	50
2.	ಮಣ್ಣಾ ಬಸವೇಶ್ವರ ಉಚಿತ ಪ್ರಸಾದ ನಿಲಯ, ಶಿಡೇನೂರು, ಬ್ಯಾಡಗಿ ತಾ:	80
3.	ಶ್ರೀ ಬಿ.ಆರ್.ಅಂಬೇಡ್ಕರ್ ಉಚಿತ ಪ್ರಸಾದ ನಿಲಯ, ಕೋಣನಕೇರಿ, ಶಿಗ್ಗಾಂವ್ ತಾ:	30
4.	ಶ್ರೀ ಸಂಗಮೇಶ್ವರ ಉಚಿತ ಪ್ರಸಾದ ನಿಲಯ ಮುಡೇನೂರು, ರಾಣಿಬೆನ್ನೂರು ತಾ:	25
5.	ಮಾರುತಿ ಉಚಿತ ಪ್ರಸಾದ ನಿಲಯ, ಹಿರೇಕೆರೂರು.	45
6.	ಸಂತಕವಿ ಕನಕದಾಸ ಉಚಿತ ಪ್ರಸಾದ ನಿಲಯ ಬೆಳವಿಗೆ, ಹಾವೇರಿ ತಾ:	25
7.	ಶ್ರೀ ಮಾತಾ ಶಿಕ್ಷಣ ಉಚಿತ ಪ್ರಸಾದ ನಿಲಯ ಚಿನ್ನಮುಳಗುಂದ, ಹಿರೇಕೆರೂರು ತಾ:	30

8. ಮಹಾತ್ಮಾಗಾಂಧಿ ಆದಿ ಕರ್ನಾಟಕ ಉಚಿತ ಪ್ರಸಾದ ನಿಲಯ, ಬ್ಯಾಡಗಿ ತಾ: 30

9. ಅನ್ನಪೂರ್ಣೇಶ್ವರಿ ಉಚಿತ ಪ್ರಸಾದ ನಿಲಯ, ರಾಣೆಬೆನ್ನೂರು. 25

10. ಮಹಾತ್ಮಾಗಾಂಧಿ ಬಿ.ಸಿ.ಹಾಸ್ಟೆಲ್, ಅಕ್ಕಿಆಲೂರು ಹಾನಗಲ್ 64

ಬಾದಾಮಿ ಪಟ್ಟಣದಲ್ಲಿನ ಐತಿಹಾಸಿಕ ಸ್ಥಳಗಳ ರಸ್ತೆ ನಿರ್ಮಾಣ

1486(2120)

ಶ್ರೀ ಚಿಮ್ಮನಕಟ್ಟಿ ಬಾಲಪ್ಪ ಭೀಮಪ್ಪ(ಬಾದಾಮಿ);ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬಾದಾಮಿ ಪಟ್ಟಣದಲ್ಲಿನ ಐತಿಹಾಸಿಕ ಸ್ಥಳಗಳಾದ ಕಪ್ಪೆ ಆರ್ಯಭಟನ ಶಾಸನದಿಂದ ಟಿಪ್ಪು ಸುಲ್ತಾನ ಟ್ರೆಜರೀವರೆಗೆ ಹಾಗೂ ಭೂತನಾಥ್ ಗುಂಪು ದೇವಾಲಯದವರೆಗೆ ರಸ್ತೆಗಳು ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸದರಿ ರಸ್ತೆಗಳನ್ನು ದುರಸ್ತಿಪಡಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಇ) ಈ ಮೇಲಿನ ಕಾಮಗಾರಿಗಾಗಿ ಬಾದಾಮಿ ಪಟ್ಟಣ ಪಂಚಾಯಿತಿಗೆ ವಿಶೇಷ ಅನುದಾನ ಬಿಡುಗಡೆ ಮಾಡಲಾಗುವುದೇ?

ಶ್ರೀ ಮಿರಾಜುದ್ದೀನ್ ಎನ್ ಪಟೇಲ್(ಪೌರಾಡಳಿತ ರಾಜ್ಯ ಸಚಿವರು):

ಅ) ಬಂದಿದೆ.

ಆ) ಈ ರಿಪೇರಿ ಕಾಮಗಾರಿಗಳನ್ನು ಮಾಡಿಸುವ ಜವಾಬ್ದಾರಿಯು ನಗರ ಸ್ಥಳೀಯ ಸಂಸ್ಥೆಯ ಚುನಾಯಿತ ಕೌನ್ಸಿಲ್‌ದ್ದಾಗಿದ್ದು,ಸರ್ಕಾರದ್ದಲ್ಲ.

ಇ) ಇಲ್ಲ, ಪ್ರಸ್ತುತ ಇಂತಹ ಯಾವುದೇ ಪ್ರಸ್ತಾವನೆಯು ಇರುವುದಿಲ್ಲ.

ಬಾದಾಮಿ ತಾಲ್ಲೂಕು ಉಗಲಾಟ ಗ್ರಾಮಕ್ಕೆ ವಸತಿ ನಿಲಯ ಮಂಜೂರಾತಿ.